ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **18/2016**

| | | |
|---|---|---|
| ಹೆಸರು | ತ್ಯಾಗರಾಜು | ಸಿ.ಡಬ್ಲ್ಯೂ - **18** |
| ತಂದೆಯ ಹೆಸರು | ಲೇಟ್ ತಿಮ್ಮಯ್ಯ | ಪಿ.ಡಬ್ಲ್ಯೂ - **14** |
| ವಯಸ್ಸು | 69 ವರ್ಷ | |
| ಉದ್ಯೋಗ | ನಿವೃತ್ತ ನೌಕರ | |
| ವಾಸ ಸ್ಥಳ | ಮೈಸೂರು | |

ಸಾಕ್ಷಿಗೆ ದಿನಾಂಕಃ 23.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ನಾನು ನೊಂದಣಿ ಅಧಿಕಾರಿಯಾಗಿ ಪ್ರಭಾರೆಯಲ್ಲಿ ಇದ್ದಾಗ ದೃಢೀಕೃತ ಪ್ರತಿಗಳನ್ನು ಕೊಡುವಂತೆ ನಮ್ಮ ಕಛೇರಿಗೆ ಹಲವು ಜನ ಸಾರ್ವಜನಿಕರು ಬರುತ್ತಿದ್ದರು. ಈಗ ನೋಡುತ್ತಿರುವ ನಿಪಿ 16 ರಲ್ಲಿ ಇರುವ ಸಹಿ ನನ್ನದಾಗಿರುತ್ತದೆ. ನಾನು ದಿ: 21.06.2010 ರಂದು ಪ್ರಭಾರ ನೊಂದಣಿ ಅಧಿಕಾರಿಯಾಗಿದ್ದಾಗ ಈಗ ನೋಡುತ್ತಿರುವ ನಿಪಿ 16 ದಾಖಲೆಯನ್ನು ನೊಂದಣಿ ಮಾಡಿರುತ್ತೇನೆ. ಆ ದಿನ ನಮ್ಮ ಕಛೇರಿಗೆ ಪತ್ರಬರಹಗಾರರಾದ ಬಸವರಾಜೇ ಅರಸ್ ರವರು ಬಂದಿದ್ದರು. ವಾಸುವಳ್ಳಿ ಗ್ರಾಮದ ಸ್ವತ್ತಿಗೆ ಸಂಬಂಧಿಸಿಂತೆ ನೊಂದಣಿ ಮಾಡಿಸಲು ಕ್ರಯ ಪತ್ರದ ಕರಡನ್ನು ಹಾಜರುಪಡಿಸಿದ್ದರು. ನಾನು ದಾಖಲೆಗಳನ್ನು ಪರಿಶೀಲಿಸಿ, ನೊಂದಣಿಗೆ ತೆಗೆದುಕೊಂಡಿರುತ್ತೇನೆ. ನನ್ನನ್ನು ಯಾರೂ ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುವುದಿಲ್ಲ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ

ನಿಪಿ 16 ರ ವಿಚಾರವಾಗಿ ಪೊಲೀಸರು ತನಿಖೆ ಮಾಡಿ, ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ 19 ಎಂದು ಗುರುತಿಸಲಾಯಿತು. ಎಲ್ಲಾ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ**3** ನೇ ಆರೋಪಿ ಪರ **:** ಶ್ರೀ**.** ವಿ**.**ಎನ್**.** ವಕೀಲರಿಂದ

ಯಾವುದೇ ದಾಖಲೆ ನೊಂದಣಿಯಾಗಬೇಕಾದರೆ ನಿಯಮಾವಳಿಗಳು ಇರುತ್ತವೆ ಎಂದರೆ ಸರಿ. ಸಾಕ್ಷಿದಾರರು ನನ್ನ ಮುಂದೆ ಸಹಿ ಮಾಡಬೇಕು ಎಂದರೆ ಸರಿ. ಸಾಕ್ಷಿದಾರರ ಗುರುತಿನ ಬಗ್ಗೆ ನಾವು ಪರಿಶೀಲನೆ ಮಾಡುವುದಿಲ್ಲ. ನಿಪಿ 16 ರಲ್ಲಿ 3 ನೇ ಆರೋಪಿಯ ಸಹಿ ಇಲ್ಲ ಎಂದರೆ

ಸರಿ. 3 ನೇ ಆರೋಪಿಯ ಸಹಿ ಇಲ್ಲ ಎಂದು ಗೊತ್ತಿದ್ದರೂ ಸಹ ನಾನು ನೊಂದಣಿ ಮಾಡಿರುತ್ತೇನೆ ಎಂದರೆ ಕೆಲಸದ ಒತ್ತಡದಲ್ಲಿ ನೋಡದೇ ನೊಂದಣಿ ಮಾಡಿರುತ್ತೇನೆ. 3 ನೇ ಆರೋಪಿಗೂ ಈ ಪತ್ರಕ್ಕೂ ಸಂಬಂಧವಿಲ್ಲದೇ ಇದ್ದರೂ ಸಹ ನಾನು ಮತ್ತು ಪೊಲೀಸರು ಸೇರಿ ನಿಪಿ 16 ನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2 ಮತ್ತು 6 ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.